'ಅಶ್ವತ್ಥಾಮ, ನಿನ್ನಿಂದ ಮೂರುಲೋಕದ ರಾಜ್ಯಾಧಿಪತ್ಯದ ವೈಭವವು ಬಂದರೂ ನನಗದು ಬೇಡ. ಕರ್ಣನ ವಿಷಯವಾಗಿ ಕೆಟ್ಟದನ್ನು ಆಡಿ ನೀನಾಗುವ ಹೊತ್ತಿಗೆ ಇನ್ನೂ ಬದುಕಿರುವೆ. ಇತರರು ನನ್ನ ಎದುರಲ್ಲಿ ಕರ್ಣನನ್ನು ಬೈದು ಬದುಕುತ್ತಿದ್ದರೇ?' ಎಂದು ಹೇಳುವ ದುರ್ಯೋಧನನಲ್ಲಿ ಕರ್ಣನ ಗೆಳೆತನಕ್ಕಿರುವ ಮಹತ್ವ ಎಂತಹದು ಎಂಬುದು ತಿಳಿಯುತ್ತದೆ.

ಹೀಗೆ ಒಂದಿಲ್ಲೊಂದು ನೆಲೆಯಲ್ಲಿ ಸಾವಿಗಾಗಿ, ನೋವಿಗಾಗಿ ಪಂಪನ ಪಾತ್ರಗಳು ಮರುಗುತ್ತವೆ, ಕೊರಗುತ್ತವೆ, ಕಂಗೆಡಿಸುತ್ತವೆ.

'ವಿಕ್ರಮಾರ್ಜುನ ವಿಜಯ' ಕಾವ್ಯದ ಕೊನೆಯ ಪದ್ಯ ಬಹುತ್ವದ ಮಹತ್ವವನ್ನು ತಿಳಿಸುತ್ತದೆ.

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪವಿದ್ಯಾ ಬಲದೊಳ್
ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿರ್ಮಲ ಚಿತ್ತಂ
ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ

ಎಂದು ಮಹಾಭಾರತದ ಪಾತ್ರಗಳ ಗುಣವಿಶೇಷಣಗಳನ್ನು ಎತ್ತಿ ಹಿಡಿಯುವ ಈ ಪದ್ಯ ಕುವೆಂಪು ಅವರ 'ಇಲ್ಲಿ ಎಲ್ಲರೂ ಮುಖ್ಯರು' ಎಂಬ ಬಹುತ್ವ ಭಾರತದ ಕಲ್ಪನೆಗೆ ಮೂಲಭಿತ್ತಿಯನ್ನು ಹಾಕಿಕೊಟ್ಟಿದೆ. ಪಂಪಭಾರತದ ನಾಯಕ ಅರ್ಜುನ/ಅರಿಕೇಸರಿ ಆದರೂ ಪಂಪ ಅರಿಕೇಸರಿ/ಅರ್ಜುನನನ್ನಷ್ಟೇ ಎತ್ತಿಹಿಡಿಯದೆ, ಸಾಮಾನ್ಯರಿಂ ಅಸಾಮಾನ್ಯರರೆಲ್ಲರಿಂದ ಕೂಡಿದರೆ ಮಾತ್ರ ಈ ಭಾರತ ಅದು ಲೋಕಪೂಜ್ಯ ಎಂದು ಬಹುತ್ವದ ಮಹತ್ವವನ್ನು ಸಾರಿದ್ದಾನೆ.

ಕುರುಕ್ಷೇತ್ರ ಯುದ್ಧದ ಆರಂಭಕ್ಕೆ ಸೇನಾಪತಿ ಯಾರಾಗಬೇಕೆಂದು ಕೌರವ ಗುಂಪಿನಲ್ಲಿ ಚರ್ಚೆ ನಡೆಯುತ್ತದೆ. ಕಡೆಗೆ ಭೀಷ್ಮನನ್ನು ಸೇನಾಪತಿಯನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇದನ್ನು ಕರ್ಣ ವಿರೋಧಿಸಿ, ಕಣ್ಣು ಕಾಣದ ಈ ಮುದುಕನಿಗೆ ಕಟ್ಟಿದ ವೀರಪಟ್ಟವು ಹಗ್ಗಕ್ಕೆ ಸಮಾನವಲ್ಲವೆ, ಆತ ಧರಿಸಿರುವ ಬಿಲ್ಲು ದಂಟಿಗೆ ಸಮಾನ ಅಲ್ಲವೆ? ಪಾಂಡವರ ಪಕ್ಷಪಾತಿಯಾದ ಭೀಷ್ಮನು ಖಂಡಿತವಾಗಿ ನಮ್ಮ ಪರ ಯುದ್ಧ ಮಾಡುವುದಿಲ್ಲ. ಹಾಗಾಗಿ ಪಾಂಡವರನ್ನು ಬಗ್ಗು ಬಡಿಯಬೇಕಾದರೆ ಸಮರ್ಥನಾದ, ಅರ್ಹನಾದ ನನಗೆ ಪಟ್ಟ ಕಟ್ಟು' ಎಂದು ದುರ್ಯೋಧನನಿಗೆ ಹೇಳುತ್ತಾನೆ. ಆಗ ಭೀಷ್ಮ– 'ಕಲಿತನದ ಉರ್ಕು, ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನು ಎನಗುಂಟೆ ಭಾರತಂ ಕಲಹಮ್ ಇದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂಚಲೆದಪೆಯಣ್ಣ ಸೂಳ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್' ಎನ್ನುತ್ತಾನೆ.

ಈ ಪದ್ಯದ ಅರ್ಥ ಹೀಗಿದೆ: 'ಕರ್ಣ ಕೇಳಣ್ಣ ಇಲ್ಲಿ (ವ್ಯಂಗ್ಯ) – ನಿನ್ನ ಶೌರ್ಯದ ಗರ್ವ, ಯೌವನದ ಸೊಕ್ಕು, ಒಡೆಯನ ಕುಮ್ಮಕ್ಕು, ಮಿಕ್ಕಂತೆ ನಿನ್ನ ತೋಳ್ಬಲದ ಅಹಮ್ಮು, ನಿನಗಿರುವಷ್ಟು ನನಗಿದೆಯೇ? ಭಾರತ ಎಂಬ ಈ ಯುದ್ಧದಲ್ಲಿ ಎದುರಾಳಿಯೋ ಅರ್ಜುನ, ನೀನೇಕೆ ಎಗರಾಡುತ್ತಿರುವೆ, ಈ ಮಹಾಯುದ್ಧರಂಗದಲ್ಲಿ ನಿನಗೂ ಸರದಿ ಬರುತ್ತದೆ ಕಾಯುತ್ತಿರಣ್ಣ.'

ಭೀಷ್ಮ ಇಲ್ಲಿ ಆಡುತ್ತಿರುವುದು ನೇರವಾಗಿ ಕರ್ಣನ ಜಾತಿ ಹಿಡಿದು, ಅವನನ್ನು ಅವಮಾನಿಸುತ್ತಿರುವ ಮಾತಾಗಿದೆ. ಭೀಷ್ಮನ ಸಾಮರ್ಥ್ಯವನ್ನು ಕರ್ಣ ಪ್ರಶ್ನಿಸಿದರೆ, ತನ್ನ ದೌರ್ಬಲ್ಯಗಳ ಬಗ್ಗೆ ಸತ್ಯ ನುಡಿದ ಕರ್ಣನ ಮಾತುಗಳನ್ನು ಅರಗಿಸಿಕೊಳ್ಳಲಾಗದ ಭೀಷ್ಮ 'ಭಾರತದ ಜಾತಿವ್ಯವಸ್ಥೆಯಲ್ಲಿ ಕೀಳು ಜಾತಿಯವನಿಗೆ ಯಾವುದೇ ಅಧಿಕಾರ, ಸವಲತ್ತುಗಳು ಸಿಗುವುದು ಮೊದಲಿಗೆ ಅಲ್ಲ, ಕೊನೆಯಲ್ಲಿ, ಹಾಗಾಗಿ ನಿನಗೂ ಸರದಿ ಬರುತ್ತದೆ, ಅದೂ ಈಗಲ್ಲ ಕೊನೆಗೆ' ಎನ್ನುವುದನ್ನು ಸೂಚಿಸುತ್ತಾನೆ. ಉನ್ನತ ಜಾತಿಯವರು ಸೇನಾಧಿಪತಿ ಹುದ್ದೆಯನ್ನು ಪಡೆದ ನಂತರ ನೀ ಪಡೆಯುವೆ. ಅಲ್ಲಿಯವರೆಗೂ ಕಾಯುತ್ತಿರುವುದು ನಿನ್ನ ಕೆಲಸ ಮತ್ತು ನಿನ್ನ ಜಾತಿಯ ಸ್ಥಿತಿ ಎಂದು ವ್ಯಂಗ್ಯವಾಗಿ ಹೇಳುತ್ತಾನೆ. ಜಾತಿ